**ಎರಡನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ ನ್ಯಾಯಾಲಯ, ಮದ್ದೂರು.**

**ಸಿಸಿ 749/2021**

| | | | |
|---|---|---|---|
| **ಸಾಕ್ಷಿದಾರರ ಹೆಸರು** | - ಕೆ ಶಿವಣ್ಣ | | **ಚಾ.ಸಾ.-6** |
| **ತಂದೆಯ ಹೆಸರು** | - ಲೇಟ್ ಕೆ ಎಸ್ ದ್ಯಾವಶೆಟ್ಟಿ | | **ಪ್ರಾ.ಸಾ.-6** |
| **ವಯಸ್ಸು** | - 73 ವರ್ಷ | | |
| **ಉದ್ಯೋಗ** | - ನಿವೃತ್ತಿ ನೌಕರ | | |
| **ವಾಸ ಸ್ಥಳ** | - ಕೆ ಆರ್ ಪೇಟೆ | | |

ದಿನಾಂಕಃ 03.09.2024 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಅಭಿಯೋಜನೆಯ ಪರಃ ಎ ಪಿ ಪಿ ರವರಿಂದಃ**

ಚಾ.ಸಾ. 1 ರಿಂದ 3 ರವರ ಪರಿಚಯವಿರುತ್ತದೆ, ಚಾ.ಸಾ. 4 ರವರ ಪರಿಚಯವಿಲ್ಲ. ಚಾ.ಸಾ. 1 ಮತ್ತು ಆರೋಪಿ 1 ರವರ ಮದುವೆಯ ಮಾತುಕತೆ ನಾನು ಸೇರಿದ್ದೆ. ಮದುವೆಯ ಸಂದರ್ಭದಲ್ಲಿ 100 ಗ್ರಾಂ ಚಿನ್ನ 50 ಸಾವಿರ ನಗದನ್ನು ವರದಕ್ಷಿಣೆಯಾಗಿ ನೀಡಬೇಕೆಂದು ಮದುವೆ ಮಾತುಕತೆಯಾಗಿರುತ್ತದೆ. ಮದುವೆಯ ಮಾತಕತೆ ನಾನು, ಚಾ.ಸಾ. 7 ರಿಂದ 11 ಹಾಗೂ ವಧುವಿನ ತಂದೆ ತಾಯಿ ಹಾಗೂ ವರನ ತಂದೆ ತಾಯಿ ಸೇರಿರುತ್ತೇವೆ. 6 ನೇ ತಿಂಗಳು 2013 ನೇ ಇಸವಿಯಲ್ಲಿ ಶ್ರೀರಂಗಪಟ್ಟಣದ ಐಯ್ಯಪ್ಪ ಸ್ವಾಮಿ ದೇವಸ್ಥಾನದಲ್ಲಿ ಆರೋಪಿ 1 ಮತ್ತು ಚಾ.ಸಾ. 1 ರವರ ಮದುವೆಯಾಗಿರುತ್ತದೆ. ಮದುವೆಯಾದ 3-4 ವರ್ಷಗಳ ಕಾಲ ಆರೋಪಿ 1 ಮತ್ತು ಚಾ.ಸಾ, 1 ರವರು ಅನ್ಯೋನ್ಯವಾಗಿದ್ದರು, ನಂತರ ಹೆಚ್ಚಿನ ವರದಕ್ಷಿಣೆಗಾಗಿ, ಆರೋಪಿ 1 ರವರು ಹಾಗೂ ಅವರ ತಂದೆ ತಾಯಿ ಕಿರುಕುಳ ನೀಡುತ್ತಿದ್ದಾರೆಂದು, ಚಾ.ಸಾ. 1 ರವರ ತಂದೆ ತಾಯಿ ನನಗೆ ಫೋನ್ ಮುಖಾಂತರ ತಿಳಿಸಿರುತ್ತಾರೆ. ನಾನು 4-5 ಬಾರಿ ನ್ಯಾಯ ಪಂಚಾಯತಿಯನ್ನು ಮಾಡಿರುತ್ತೇನೆ. ಆದರೂ ಆರೋಪಿತರು, ಚಾ.ಸಾ. 1 ರವರಿಗೆ ಹೆಚ್ಚಿನ ವರದಕ್ಷಿಣೆ ಹಣಕ್ಕಾಗಿ ಕಿರುಕುಳ ನೀಡುತ್ತಿದ್ದು, ಈ ಕುರಿತು ಚಾ.ಸಾ. 1 ರವರು ಪೋಲೀಸರಿಗೆ ದೂರನ್ನು

ನೀಡಿರುತ್ತಾರೆ. ನಾನು ಈ ಪ್ರಕರಣವನ್ನು ಕುರಿತು ಪೋಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

**( ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿದಾರರನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಅನುಮತಿ ನೀಡಲಾಯಿತು. )**

**<u>ಪಾಟೀ ಸವಾಲುಃ ಮಾನ್ಯ ಎ ಪಿ ಪಿ ರವರಿಂದಃ</u>**

ಆರೋಪಿತರು, ಚಾ,ಸಾ. 1 ರವರಿಗೆ ಹೆಚ್ಚಿಗೆ ವರದಕ್ಷಿಣೆ ಹಣ ತರುವಂತೆ, ಅವ್ಯಾಚ್ಯ ಶಬ್ದಗಳಿಂದ ನಿಂದಿಸಿ, ಕಿರುಕುಳ ನೀಡುತ್ತಿದ್ದರು ಎಂದರೆ ಸರಿ. 50 ಸಾವಿರ ರೂ. ಹೆಚ್ಚಿಗೆ ವರದಕ್ಷಿಣೆ ಯನ್ನು ನೀಡುವಂತೆ ಕೇಳಿದಾಗ, ಚಾ.ಸಾ, 3 ರವರು ಸಾಲ ಮಾಡಿ, 50 ಸಾವಿರ ಹಣವನ್ನು ನೀಡಿರುತ್ತಾರೆಂದರೆ ಸರಿ. ಹಣ ಕೊಟ್ಟ ನಂತರ ಸ್ವಲ್ಪ ದಿನಗಳ ಕಾಲ ಚೆನ್ನಾಗಿ ನೋಡಿಕೊಂಡು ನಂತರ ಪುನಃ ಕಿರುಕುಳ ನೀಡುತ್ತಿದ್ದರು ಎಂದರೆ ಸರಿ. ಆಗ ಚಾ.ಸಾ. 1 ರವರು ತನ್ನ ಮೈಮೇಲೆ ಇದ್ದಂತಹ ಒಡವೆಗಳನ್ನು ಕೂಡ ಆರೋಪಿತರಿಗೆ ಕೊಟ್ಟಿರುತ್ತಾರೆಂದರೆ ಸರಿ. ದಿನಾಂಕಃ 05.11.2019 ರಂದು, ರಾತ್ರಿ ಸುಮಾರು 11.00 ಗಂಟೆಯ ಸಮಯದಲ್ಲಿ ಆರೋಪಿತರು, ಚಾ.ಸಾ. 1 ರವರಿಗೆ ಇನ್ನೂ ಹೆಚ್ಚಿನ ವರದಕ್ಷಿಣೆ ಹಣವನ್ನು ತೆಗೆದುಕೊಂಡು ಬಾ ಎಂದು ಹೇಳಿ ಚಾ.ಸಾ.1 ರವರ ಕತ್ತಿನಲ್ಲಿದ್ದ ಚಿನ್ನದ ಮಾಂಗಲ್ಯದ ಸರವನ್ನು ಬಿಚ್ಚಿಸಿಕೊಂಡು ಅವರ ಮೇಲೆ ಹಲ್ಲೆ ಮಾಡಿ ಮನೆಯಿಂದ ಹೊರಗಡೆ ಹಾಕಿರುತ್ತಾರೆಂದರೆ ಸರಿ. ನಂತರ, ಪಕ್ಕದ ಮನೆಯ ಚಾ.ಸಾ. 2 ರವರು ಆರೋಪಿತರಿಗೆ ಬುದ್ದಿ ಹೇಳಿ, ಮಾಂಗಲ್ಯದ ಸರವನ್ನು ಚಾ.ಸಾ, 1 ರವರಿಗೆ ವಾಪಸ್ಸು ಕೊಡಿಸಿ, ಆರೋಪಿತರ ಮನೆಗೆ ಕಳುಹಿಸಿಕೊಟ್ಟಿರುತ್ತಾರೆಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಿನಾಂಕಃ 22.11.2019 ರಂದು, ನೀವು ಹಾಗೂ ಚಾ.ಸಾ. 7 ರಿಂದ 11 ರವರು ರಾಜೀ ಪಂಚಾಯತಿ ಮಾಡಿ, ಆರೋಪಿತರಿಗೆ ಬುದ್ದಿವಾದ ಹೇಳಿ, ಅನ್ಯೋನ್ಯವಾಗಿ ಸಂಸಾರ ಮಾಡಿಕೊಂಡು ಹೋಗುವಂತೆ, ಆರೋಪಿತರಿಗೆ ತಿಳಿಸಿದಾಗ, ಹೆಚ್ಚಿನ ವರದಕ್ಷಿಣೆ ಹಣ ಕೊಟ್ಟರಷ್ಟೇ ಚಾ.ಸಾ, 1 ರವರನ್ನು ನಮ್ಮ ಮನೆಗೆ ಸೇರಿಸುವುದು ಎಂದು, ಹೇಳಿರುತ್ತಾರೆಂದರೆ ಸರಿ. ನೀವು ಈ ಕುರಿತು ದಿನಾಂಕಃ 25.11.2019 ರಂದು, ಪೋಲೀಸರಿಗೆ ಹೇಳಿಕೆಯನ್ನು ನೀಡಿರುತ್ತೀರಿ ಎಂದರೆ ಸರಿಯಲ್ಲ. ಸಾಕ್ಷಿ ಒಪ್ಪದ ಹೇಳಿಕೆಯನ್ನು ನಿ.ಪಿ. 7 ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿ 3 ಮತ್ತು 4 ರವರನ್ನು ನೋಡಿ ಗುರುತಿಸಿರುತ್ತಾರೆ, ಆರೋಪಿ 2 ಮತ್ತು

5 ರವರನ್ನು ನೋಡಿದರೆ ಗುರುತಿಸುತ್ತೇನೆ. ಈ ದಿನ ಅವರ ಗೈರು ಹಾಜರಿ ಕೋರಿ ಆರೋಪಿ ಪರ ವಕೀಲರು ಅರ್ಜಿಯನ್ನು ಸಲ್ಲಿಸಿದ್ದು, ಅವರನ್ನು ನೋಡಿ ಗುರುತಿಸಲು ತಕರಾರು ಇಲ್ಲ ಎಂದು ಅರೋಪಿತರ ಪರ ವಕೀಲರು ತಿಳಿಸಿರುತ್ತಾರೆ,

**ಪಾಟೀ ಸವಾಲುಃ ಆರೋಪಿ ಪರ ವಕೀಲರುಃ ಶ್ರೀ ಹೆಚ್ ಎಂ ರವರಿಂದಃ**

ಚಾ.ಸಾ. 3 ರವರು ನನ್ನ ಸಂಬಂಧಿಕರಲ್ಲ. ಚಾ.ಸಾ. 3 ರವರು ವ್ಯವಸಾಯ ಮಾಡುತ್ತಾರೆ. ಅವರಿಗೆ ಎಷ್ಟು ಜಮೀನು ಇದೆಯೆಂದು ನನಗೆ ನಿಖರವಾಗಿ ಗೊತ್ತಿಲ್ಲ. ಅವರ ಜಮೀನಿನಿಂದ ಬರುವ ಉತ್ಪತ್ತಿ ಅವರ ಕುಟುಂಬಕ್ಕೆ ಸಾಕಾಗುವುದಿಲ್ಲ ಎಂದರೆ ಸರಿಯಲ್ಲ. ಅವರು ವ್ಯವಸಾಯ ಅಲ್ಲದೇ ಕೂಲಿ ಕೆಲಸವನ್ನೂ ಕೂಡ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ಮದುವೆಗೆ ಚಾ.ಸಾ.2 ಮತ್ತು 3 ರವರು ಸುಮಾರು 4-5 ಲಕ್ಷ ಖರ್ಚು ಮಾಡಿದ್ದಾರೆ. ಸದರೀ ಹಣವನ್ನು ಎಲ್ಲಿಂದ ತಂದರು ಎಂದು ನನಗೆ ಗೊತ್ತಿಲ್ಲ. ಚಾ.ಸಾ. 1 ರವರು ಬಡ ಕುಟುಂಬದವರು ಆಗಿರುವ ಕಾರಣ ಅರೋಪಿತರೇ ಚಾ.ಸಾ. 1 ರವರ ಮದುವೆಯ ಖರ್ಚನ್ನು ಭರಿಸಿರುತ್ತಾರೆಂದರೆ ಸರಿಯಲ್ಲ. ಮದುವೆಯಾಗುವ 15 ದಿವಸಗಳ ಮುಂಚಿತವಾಗಿ ಮದುವೆಯ ಮಾತುಕತೆಗೆ ನಾವು ಸೇರಿದ್ದೆವು. ಆರೋಪಿತರ ಊರಿನಲ್ಲಿಯೇ ಮದುವೆಯ ಮಾತುಕತೆಗೆ ಸೇರಿದ್ದೆವು. ಸದರೀ ಮದುವೆಯಾ ಮಾತುಕತೆಗೆ ಸೇರಿದ್ದ ದಿನಾಂಕ ನನಗೆ ನೆನಪಿಲ್ಲ. ಸದರೀ ಮದುವೆಯ ಮಾತುಕತೆಗೆ ನಾನು, ಮಲ್ಲೇಶ್,ಶ್ರೀನಿವಾಸ ಮತ್ತು ಊರಿನ ಗ್ರಾಮಸ್ಥರು ಸೇರಿದ್ದರು, ಅವರುಗಳ ಹೆಸರು ನನಗೆ ಗೊತ್ತಿಲ್ಲ. ಮದುವೆಯ ಮಾತುಕತೆಯ ಸಂದರ್ಭದಲ್ಲಿ ಚಾ.ಸಾ. 3 ರವರು ಆರೋಪಿತರಿಗೆ ಹಣವನ್ನು ನೀಡಿರುತ್ತಾರೆ. ಹುಡುಗನ ತಂದೆಗೆ ಮಾತುಕತೆಯ ಸಂದರ್ಭದಲ್ಲಿ 50 ಸಾವಿರ ಹಣ ನೀಡಿರುತ್ತಾರೆ. ಮೋಟಾರು ಬೈಕ್ ನ್ನು ಖರೀದಿಸುವ ಸಲುವಾಗಿ 50 ಸಾವಿರ ಹಣವನ್ನು ನೀಡಿರುತ್ತಾರೆ. ನನ್ನ ಎದುರುಗಡೆ ಯಾವುದೇ ಹಣವನ್ನು ನೀಡಿರುವುದಿಲ್ಲ. ಆದರೆ ಮದುವೆಯ ಸಂದರ್ಭದಲ್ಲಿ 50 ಸಾವಿರ ಹಣವನ್ನು ನೀಡಿರುತ್ತಾರೆ. ಚಿನ್ನ ಮತ್ತು ಬೆಳ್ಳಿ ಒಡವೆಗಳನ್ನು ನನ್ನ ಸಮಕ್ಷಮದಲ್ಲಿ ನೀಡಿರುವುದಿಲ್ಲ. ಚಾ.ಸಾ. 2 ಮತ್ತು 3 ರವರಿಗೆ ಚಿನ್ನಾಭರಣಗಳನ್ನು ಮತ್ತು ಮೋಟಾರು ಬೈಕ್ ನ್ನು ಕೊಡಿಸುವ ಸಾಮರ್ಥ್ಯ ಇರಲಿಲ್ಲ ಎಂದರೆ ಸರಿಯಲ್ಲ. ಮದುವೆಗೆ ಮೊದಲು ಮಾತುಕತೆಯಾಗಿರುತ್ತದೆಯೆಂದು ಮತ್ತು ಮದುವೆಯ ಸಂದರ್ಭದಲ್ಲಿ ಹಣ ನೀಡಿದ್ದಾರೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಮದುವೆಯಾದ ನಂತರ ಚಾ.ಸಾ. 1 ಮತ್ತು ಆರೋಪಿ 1 ರವರು ಮದ್ದೂರಿನ ಶಿವಪುರದಲ್ಲಿ ವಾಸವಾಗಿದ್ದರು.

ಹುಡುಗನ ತಂದೆ, ಪಿ ಎಲ್ ಡಿ ಬ್ಯಾಂಕ್ ನಲ್ಲಿ ಕೆಲಸದಲ್ಲಿದ್ದರು ಎಂದರೆ ಸರಿ. ಮದುವೆಯಾದ ನಂತರ ಚಾ.ಸಾ. 1 ಮತ್ತು ಆರೋಪಿ 1 ರವರನ್ನು ಮದ್ದೂರಿನ ಶಿವಪುರದಲ್ಲಿ ಬಿಟ್ಟು ಆರೋಪಿ 1 ರವರ ತಂದೆ ತಾಯಿ ಮಂಡ್ಯದಲ್ಲಿ ವಾಸವಾಗಿದ್ದರು ಎಂದರೆ ಸರಿಯಲ್ಲ. ಆರೋಪಿ 1 ರವರ ತಂಗಿಯ ಗಂಡ ಬೆಂಗಳೂರಿನಲ್ಲಿ ಕೆ ಇ ಬಿ ಯಲ್ಲಿ ಕೆಲಸದಲ್ಲಿದ್ದಾರೆಂದರೆ ಸರಿ. ಆರೋಪಿ 1 ರವರ ತಂಗಿ ಮತ್ತು ಅವರ ಗಂಡ ಬೆಂಗಳೂರಿನಲ್ಲಿ ವಾಸವಾಗಿದ್ದಾರೆಂದರೆ ಸರಿಯಲ್ಲ. ಸಾಕ್ಷಿ ಮಂಡ್ಯದಲ್ಲಿ ವಾಸವಾಗಿದ್ದಾರೆಂದು ನುಡಿಯುತ್ತಾರೆ. ಮದುವೆಯಾದ ನಂತರ ಆರೋಪಿ 1 ರವರ ಮನೆಗೆ ಸುಮಾರು 5-6 ಬಾರಿ ಹೋಗಿರುತ್ತೇನೆ. ಮದುವೆಯಾದ ಮೂರು ದಿವಸಗಳ ನಂತರ ಬೀಗರ ಊಟಕ್ಕೆ ಹೋಗಿದ್ದೆವು. ನಂತರ 6 ತಿಂಗಳಿಗೊಮ್ಮೆ ಆರೋಪಿ 1 ರವರ ಮನೆಗೆ ಹೋಗುತ್ತಿದ್ದೆ. ಕೊನೆಯ ಬಾರಿ 2019 ನೇ ಇಸವಿಯಲ್ಲಿ ಹೋಗಿರುತ್ತೇನೆ. ಚಾ.ಸಾ, 1 ರವರ ಜೊತೆ ದೂರು ನೀಡಲು ನಾನೂ ಕೂಡ ಪೋಲೀಸ್ ಠಾಣೆಗೆ ಹೋಗಿದ್ದೆ. ಪುನಃ 50 ಸಾವಿರ ಹಣವನ್ನು ಚಾ.ಸಾ. 3 ರವರು ಯಾವ ದಿನಾಂಕದಂದು ನೀಡಿರುತ್ತಾರೆಂದರೆ ಸಾಕ್ಷಿ ನನಗೆ ದಿನಾಂಕ ಗೊತ್ತಿಲ್ಲ. ಆದರೆ ಹಣ ಕೇಳುತ್ತಿದ್ದಾರೆಂದು ಚಾ.ಸಾ, 3 ರವರು ನನಗೆ ತಿಳಿಸಿರುತ್ತಾರೆ. 2019 ನೇ ಇಸವಿಯ 6 ನೇ ತಿಂಗಳಿನಲ್ಲಿ ಆರೋಪಿತರು ಚಾ,ಸಾ, 1 ರವರಿಗೆ ಹಣವನ್ನು ತೆಗೆದುಕೊಂಡು ಬಂದರೆ ಮಾತ್ರ ಮನೆಗೆ ಬಾ ಇಲ್ಲದಿದ್ದ ಬರಬೇಡ ಎಂದು ತಿಳಿಸಿರುತ್ತಾರೆ. ನಂತರ, ಆರೋಪಿತರು ಚಾ.ಸಾ, 1 ರವರನ್ನು ಹೊಡೆದು, ಅವರ ತವರು ಮನೆಗೆ ಕಳುಹಿರುತ್ತಾರೆ. ಆಗ ಚಾ.ಸಾ. 1 ರವರು ದೂರು ನೀಡಿದರಾ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಚಾ.ಸಾ, 1 ರವರನ್ನು ಹೊಡೆದಿರುವುದನ್ನು ನಾನು ನೋಡಿರುವುದಿಲ್ಲ. ಆದರೆ ಹಿಂಸೆ ಮಾಡುತ್ತಿದ್ದಾರೆಂಬುದನ್ನು ನನಗೆ ತಿಳಿಸಿರುತ್ತಾರೆಂದು ನುಡಿಯುತ್ತಾರೆ. ಸದರೀ ವಿಚಾರವನ್ನು ಚಾ.ಸಾ, 1 ರವರು ನನಗೆ ದೂರವಾಣಿ ಕರೆ ಮಾಡಿ ತಿಳಿಸಿರುತ್ತಾರೆ. ದಿನಾಂಕ ನನಗೆ ಗೊತ್ತಿಲ್ಲ, ಆದರೆ ದೂರು ನೀಡುವ 2-3 ದಿನಗಳ ಮುಂಚೆ ತಿಳಿಸಿರುತ್ತಾರೆ. ಚಾ.ಸಾ, 1 ರವರ ಮೊಬೈಲ್ ನಂಬರ್ ನನಗೆ ಗೊತ್ತಿಲ್ಲ, ಆದರೆ ಬುಕ್ಕಿನಲ್ಲಿ ಬರೆದುಕೊಂಡಿದ್ದೇನೆ. ಆರೋಪಿತರು ಚಾ.ಸಾ. 1 ರವರಿಗೆ 50 ಸಾವಿರ ಹಣ ನೀಡುವಂತೆ ಎಂದು ಕೂಡ ತಿಳಿಸಿಲ್ಲ ಎಂದರೆ ಸರಿಯಲ್ಲ, ಆರೋಪಿತರು ಚಾ.ಸಾ, 1 ರವರಿಗೆ ವರದಕ್ಷಿಣೆ ಕಿರುಕುಳವನ್ನು ನೀಡುತ್ತಿರಲಿಲ್ಲ ಎಂದರೆ ಸಾಕ್ಷಿ ಕಿರುಕುಳ ನೀಡುತ್ತಿದ್ದಾರೆಂದು ನನಗೆ ತಿಳಿಸಿರುತ್ತಾರೆಂದು ನುಡಿಯುತ್ತಾರೆ. ಆರೋಪಿತರ ವಿರುದ್ಧ ದೂರು ಕೊಡಬೇಕೆಂಬ ಉದ್ದೇಶದಿಂದಲೇ ನೀವು, ಚಾ.ಸಾ. 3 ರವರು ಮತ್ತುಚಾ.ಸಾ. 1 ರವರು ಸಂಚು ರೂಪಿಸಿ ದೂರು ನೀಡಿರುತ್ತೀರಿ ಎಂದರೆ

ಸರಿಯಲ್ಲ. ಚಾ,ಸಾ. 3 ರವರ ಮಾತು ಕೇಳಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ )

ಓ ಹೇ ಕೇ ಸರಿಯಾಗಿದೆಯೆಂದು ಒಪ್ಪಿರುತ್ತಾರೆ.

2 ನೇ ಅಪರ ಸಿವಿಲ್ ನ್ಯಾಯಾಧೀಶರು

ಸಾಕ್ಷಿ ಸಹಿ ಮತ್ತು ಜೆ ಎಂ ಎಫ್ ಸಿ , ಮದ್ದೂರು.